# ನನಗೂ ರೆಕ್ಕೆ ಬೇಕು



ಆ ದಿನ ಯಾಕೋ ಗೊದ್ದಕ್ಕೆ ತುಂಬಾ ಬೇಜಾರಾಗಿತ್ತು. ಏನೂ ಕೆಲಸ ಮಾಡೋಕೆ ಮನಸ್ಸೇ ಬರ್ತಿರಲಿಲ್ಲ. ಹಾಗೇ ಸುಮ್ಮನೆ ಒಂದು ಹೂವಿನ ಗಿಡದ ಕೆಳಗೆ ಮಲಗಿಕೊಂಡಿತ್ತು. ಏನೋ ಸದ್ದಾದಂತಾಗಿ ಮೇಲೆ ನೋಡಿತು. ಬಣ್ಣದ ಚಿಟ್ಟೆ ವಯ್ಯಾರದಿಂದ ಮೇಲೆ ಹಾರುತ್ತಾ ಚಂದದ ಹೂವಿನ ಮೇಲೆ ಕುಳಿತುಕೊಂಡಿತ್ತು.

ಆ ಚಿಟ್ಟೆ ಹಾಗೂ ಗೊದ್ದ ಇಬ್ಬರೂ ಹಳೆಯ ಸ್ನೇಹಿತರು. ಹೂವಿನ ಮಕರಂದವನ್ನು ಹೀರಿದ ಚಿಟ್ಟೆ ಸಂತೋಷದಿಂದ ಹಾರಾಡುತ್ತಿರುವಾಗ ಮುಖ ಬಾಡಿಸಿಕೊಂಡು ಸಪ್ಪಗೆ ಮಲಗಿರುವ ಗೊದ್ದ ಕಾಣಿಸಿತು.

‘ಯಾಕೆ ಗೆಳತಿ ಹೀಗೆ ಸಪ್ಪಗಿದ್ದಿ. ನೋಡು, ಪ್ರಪಂಚ ಎಷ್ಟು ಸುಂದರವಾಗಿದೆ. ಗಿಡಗಳಲ್ಲಿ ಬಣ್ಣದ ಹೂಗಳು ನಗುತ್ತಾ ಇವೆ. ನೀನು ನಿಮ್ಮವರನ್ನೆಲ್ಲಾ ಬಿಟ್ಟು ಯಾಕೆ ಹೀಗೆ ಬೇಜಾರಿನಿಂದ ಕಾಲ ಕಳೆಯುತ್ತಾ ಇದ್ದೀಯಲ್ಲ.’ ಎಂದು ಕಳಕಳಿಯಿಂದ ಕೇಳಿತು.

‘ನೀನಾದ್ರೆ ಎಷ್ಟು ಚೆನ್ನಾಗಿದ್ದೀಯ. ಹಾಗೆ ಎಲ್ಲಿಗೆ ಬೇಕೋ ಅಲ್ಲಿ ಪುರ್ರ್ ಅಂತ ಹಾರಿಬಿಡ್ತೀಯ. ನಿನಗೆ ಯಾರದೂ ಅಡ್ಡಿಯಿಲ್ಲ. ನಿನಗೋಸ್ಕರ ಹೂಗಳೂ ಅರಳಿ ಕಾಯುತ್ತಾ ಇರುತ್ತವೆ. ನೀನು ಸಿಹಿ ಸಿಹಿ ಮಕರಂದ ಕುಡಿದುಬಿಡ್ತೀಯಾ. ಅದೇ ನಾನು ನೋಡು, ಹೇಗಿದ್ದೀನಿ. ನನ್ನನ್ನು ಕಂಡ್ರೆ ಯಾರಿಗೂ ಇಷ್ಟ ಅಗೋದೇ ಇಲ್ಲ’ ಎಂದು ಗೊದ್ದ ತನ್ನ ಬೇಸರವನ್ನು ಹೇಳಿಕೊಂಡಿತು.

‘ನೀನು ಚೆನ್ನಾಗಿಯೇ ಇದ್ದೀಯ. ಎಷ್ಟು ಬೇಗ ಎಲ್ಲಿಗೆ ಬೇಕಾದ್ರೂ ಓಡಿ ಓಡಿ ಹೋಗ್ತೀಯ. ಮಣ್ಣನ್ನೆಲ್ಲ ಕೊರೆದು ಮನೆ ಮಾಡ್ತೀಯ. ನಿನಗಿಂತ ಹೆಚ್ಚು ಭಾರವನ್ನು ಹೊತ್ತುಕೊಳ್ಳುತ್ತೀಯಾ . ಎಷ್ಟು ಚೆನ್ನಾಗಿ ನೀವೆಲ್ಲಾ ಸಾಲಿನಲ್ಲಿ ಹೋಗ್ತೀರಾ. ಯಾರಾದರೂ ತೊಂದರೆ ಕೊಡೋಕೆ ಬಂದ್ರೆ ಕಚ್ಚಿ ಹೆದರಿಸ್ತೀಯಾ. ಮರದ ಮೇಲೆಯೂ ಇರ್ತೀಯಾ. ಎಲ್ಲಿ ಬೇಕೋ ಅಲ್ಲಿಗೆ ಹೋಗಬಹುದು. ನನಗೆ ಎಷ್ಟೊಂದು ಸಲ ಚಿಕ್ಕ ಮಕ್ಕಳು ಗೋಳು ಹೊಯ್ದುಕೊಳ್ಳುತ್ತಾರೆ. ನನ್ನನ್ನು ಹೇಗೋ ಹಿಡಿದು ರೆಕ್ಕೆ ಕಿತ್ತುಬಿಡ್ತಾರೆ. ಆಗ ನನಗೆ ಮತ್ತೇನೂ ಮಾಡೋಕೆ ಆಗೋದೇ ಇಲ್ಲ. ದಿನಾ ನನ್ನ ಹೊಟ್ಟೆ ತುಂಬಿಸಿಕೊಳ್ಳೋಕೆ ಎಷ್ಟೊಂದು ಹೂವುಗಳನ್ನು ಹುಡುಕಿಕೊಂಡು ಹೋಗ್ಬೇಕು ಗೊತ್ತಾ? ನಾವು ಹೇಗೆ ಇರ್ತೀವೋ, ನಮಗೆ ಹಾಗೇ ಅಭ್ಯಾಸ ಆಗಿರತ್ತಲ್ಲವಾ? ಅದೇ ನಮಗೆ ಒಳ್ಳೆಯದು. ನಿನಗೆ ರೆಕ್ಕೆ ಇಲ್ಲದಿದ್ದರೆ ಏನಾಯಿತು. ಪುಟಾಣಿ ಕೈಕಾಲುಗಳು ಇದ್ದಾವಲ್ಲ. ನೀವೆಲ್ಲ ಸೇರ್ಕೊಂಡು ಸಾಲಾಗಿ ಹೋಗ್ತಾ ಇದ್ರೆ ನೋಡೋಕೆ ಎಷ್ಟು ಚೆನ್ನಾಗಿ ಕಾಣ್ತೀರಿ. ಒಗ್ಗಟ್ಟು ನಿಮ್ಮನ್ನು ನೋಡಿ ಎಲ್ಲರೂ ಒಗ್ಗಟ್ಟನ್ನು ಕಲಿತುಕೊಳ್ಳಬೇಕು’ ಎಂದು ಗೊದ್ದವನ್ನು ಸಮಾಧಾನ ಮಾಡೋಕೆ ಚಿಟ್ಟೆ ಪ್ರಯತ್ನಪಟ್ಟಿತು.

‘ಹೀಗೆಲ್ಲಾ ನೀನು ನನ್ನನ್ನ ಸಮಾಧಾನ ಮಾಡೋಕೆ ಹೇಳ್ತಾ ಇದ್ದೀಯಾ. ಅದೆಲ್ಲಾ ಮಾತು ಬೇಡ. ನೀನು ನನಗೆ ನಿಜವಾಗಿಯೂ ಗೆಳತಿಯಾಗಿದ್ದರೆ ನನಗೂ ನಿನ್ನಂತಹ ರೆಕ್ಕೆ ತಂದುಕೊಡು. ಹಾಗೆಯೇ ನನಗೂ ನಿನ್ನ ಹಾಗೆ ಹಾರುವಂತೆ ಮಾಡು’ ಎಂದು ಗೊದ್ದ ಕೇಳಿಕೊಂಡಿತು.

ಚಿಟ್ಟೆಗೆ ಆ ಗೊದ್ದದ ಬಗ್ಗೆ ಪಾಪ ಎನಿಸಿತು. ಏನು ಮಾಡುವುದು, ನನ್ನ ರೆಕ್ಕೆ ಕೀಳೋಕೆ ಆಗೋಲ್ಲವಲ್ಲ. ಈ ಗೊದ್ದ ಹೇಳಿದರೆ ಕೇಳಬೇಕಲ್ಲ ಎಂದುಕೊಂಡು, ‘ಆಗಲಿ ಗೆಳತಿ, ಬೇಸರ ಪಟ್ಕೊಬೇಡ. ನಾನು ನಿನಗಾಗಿ ರೆಕ್ಕೆ ತಂದ್ಕೊಡ್ತೀನಿ’ ಎಂದು ಹೇಳಿ ಹಾರುತ್ತಾ ಹೋಯಿತು. ಚಿಟ್ಟೆಗಳೆಲ್ಲವೂ ಸೇರುವ ದೊಡ್ಡ ಹೂತೋಟಕ್ಕೆ ಹೋಗಿ ಗಿಡವೊಂದರ ಮೇಲೆ ಕುಳಿತುಕೊಂಡಿತು. ಅಲ್ಲಿ ಎಲ್ಲರನ್ನೂ ಮಾತನಾಡಿಸಿ ಸೂಕ್ಷ್ಮವಾಗಿ ಗಮನಿಸುತ್ತಿರುವಾಗ ಮೂಲೆಯಲ್ಲಿ